ದಿನಾಂಕ.14-02-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಕರಿಸಲಾಯಿತು.

**ಮುಂದುವರಿದ ಪಾಟಿ ಸವಾಲುಃ** 3 ನೇ ಎದುರುದಾರರ ಪರ ಶ್ರೀ ಎ ಎನ್ ಟಿ ವಕೀಲರಿಂದಃ

25. ನಾನು ತೆಜಸ್ವಿನಿ ಆಸ್ಪತ್ರೆಗೆ ನಾಲ್ಕೈದು ಬಾರಿ ತಪಾಸಣೆಗಾಗಿ ಹೋಗಿದ್ದೆ. ನಾನು ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಡಿಸ್‌ಚಾರ್ಜ್ ಆದ ಎಷ್ಟು ದಿನಕ್ಕೆ ಹೋಗಿದ್ದೆ ಎಂದು ನೆನಪಿಲ್ಲ. ಅಂಗನ್ಯೂನ್ಯತೆಯನ್ನು ನಿರ್ಧರಿಸಲು ಆಸ್ಪತ್ರೆಗೆ ಹೋದದ್ದು ಉಂಟಾ ಎಂದರೆ ಸಾಕ್ಷಿ ಅಂಗಾಂಗ ತಪಾಸಣೆ ಮಾಡಿ ಮಾಹಿತಿ ನೀಡಿರುತ್ತಾರೆ. ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯುವ ಮುಂಚೆ ಎಕ್ಸರೇ ತೆಗೆದದ್ದು ಇಲ್ಲ ಎಂದರೆ ಸರಿಯಲ್ಲ. ಆ ಬಾಪ್ತು ಎಕ್ಸರೆ ನನ್ನ ಬಳಿ ಇದೆ. ಅದರ ರಿಪೋರ್ಟ್ ನನ್ನ ಬಳಿ ಇದೆ. ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ನನಗೆ ಈಗ ಮೆಟ್ಟಿಲು ಹತ್ತಿ ಇಳಿಯಲು ಆಗುತ್ತದೆ ಎಂದರೆ ಸರಿಯಲ್ಲ. ನನಗೆ ಯಾವುದೆ ಅಂಗನ್ಯೂನ್ಯತೆ ಇಲ್ಲದೆ ಇದ್ದರೂ ಕೂಡ ಡಾಕ್ಟರ್ ಗೆ ಪ್ರಭಾವ ಬೀರಿ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

26. ನನ್ನ ಮದುವೆಯಾಗಿ 30 ರಿಂದ 31 ವರ್ಷ ಆಗಿರಬಹುದು. ನಾನು ಮತ್ತು ನನ್ನ ಹೆಂಡತಿ ಜೊತೆ ಇದ್ದೇವೆ ಎಂದರೆ ಸರಿ. ನನಗೆ ಇಬ್ಬರು ಮಕ್ಕಳು ಇದ್ದಾರೆ. ವೈದ್ಯಕೀಯ ಖರ್ಚು ಆದ ಬಗ್ಗೆ ಎಲ್ಲಾ ಬಿಲ್ ಗಳನ್ನು ಹಾಜರು ಪಡಿಸಿದ್ದೇನೆ.

27. ನನಗೆ ತಿಂಗಳಿಗೆ ನಾನು ಹೇಳಿದಂತೆ 20 ಸಾವಿರ ಆದಾಯ ಇಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿರುವುದರಿಂದ 3 ನೇ ಎದುರುದಾರರು ಪರಿಹಾರ ನೀಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ಕಾಲಕ್ಕೆ ಕಾರು ಸಂಖ್ಯೆ ಜಿ ಎ -06/ಇ-1467 ರ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಚಾಲನಾ ಪರವಾನಿಗೆ ಇಲ್ಲದೆ ಇದ್ದುದರಿಂದ

ಪಿ.ಡಬ್ಲ್ಯೂ-1

ವಿಮೆಯ ಶರತ್ತುಗಳು ಉಲ್ಲಂಘನೆಯಾಗಿ 3 ನೇ ಎದುರುದಾರರು ಪರಿಹಾರ ನೀಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.